ಮಂಗಳೂರು ವಿಶ್ವವಿದ್ಯಾನಿಲಯ

ಸಂಖ್ಯೆ: ಮಂ.ವಿ./ಪ.ವಿ/.ಕೋ.ಬ.ಹೊ/7/2023-24/ಇ19

ಕುಲಸಚಿವರ ಕಛೇರಿ,
ಮಂಗಳಗಂಗೋತ್ರಿ - 574 199.
ದಿನಾಂಕ 31.08.2023

ಟೆಂಡರು ಅಧಿಸೂಚನೆ

ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರು (ಪರೀಕ್ಷಾಂಗ) ಕಛೇರಿಗೆ ಈ ಕೆಳಗೆ ತಿಳಿಸಲಾದ ಸುತ್ತಳತೆಯ ದೊಡ್ಡ ಹಾಗೂ ಸಣ್ಣ ಗಾತ್ರದ ಬಟ್ಟೆ ಚೀಲಗಳನ್ನು ಹೊಲಿದು ಪೂರೈಸಲು ಆದಾಯ ತೆರಿಗೆ ಇಲಾಖೆಯ ಪಾನ್ ಸಂಖ್ಯೆ ಹೊಂದಿರುವ ಹೊಲಿಗೆದಾರರು ಕೆಳಗಿನ ನಮೂನೆಯಲ್ಲಿ ತಮ್ಮ ದರಗಳನ್ನು ಮೊಹರು ಮಾಡಿದ ಲಕೋಟೆಯಲ್ಲಿ **"ಬಟ್ಟೆ ಚೀಲಗಳ ಹೊಲಿಗೆಗೆ ದರಪಟ್ಟಿ"** ಎಂದು ನಮೂದಿಸಿ ದಿನಾಂಕ 15.09.2023 ರಂದು ಸಂಜೆ 4.00 ಗಂಟೆಯ ಒಳಗಾಗಿ ಕುಲಸಚಿವರು (ಪರೀಕ್ಷಾ0ಗ), ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ ಈ ವಿಳಾಸದಲ್ಲಿ ಸ್ವೀಕೃತಿಯಾಗುವಂತೆ ಸಲ್ಲಿಸಲು ಸೂಚಿಸಲಾಗಿದೆ.

ಕ್ರ. ಸಂ.	ಹೊಲಿಯಬೇಕಾದ ಬಟ್ಟೆಯ ಚೀಲದ ಸುತ್ತಳತೆ	ಬಟ್ಟೆಯ ಅಗಲ	ಬಟ್ಟೆಯ ಪ್ರಮಾಣ	ಹೊಲಿಯಬೇಕಾದ ಚೀಲಗಳ ಸಂಖ್ಯೆ	ಚೀಲ ಒಂದರ ದರ ರೂ.
1.	57″ x 42″	120 ಸೆಂ.ಮೀ.	35,000 ಮೀಟರ್	70,000	
2.	48″ x 40″	120 ಸೆಂ.ಮೀ.	15,000 ಮೀಟರ್	45,000	

ಷರತ್ತುಗಳು:

1. ಹೊಲಿಗೆದಾರರು ರೂ. 1,000.00ರ ಮುಂಗಡ ಠೇವಣಿ ಇರಿಸತಕ್ಕದ್ದು. ಠೇವಣಿಯ ಮೊತ್ತ ರೂ.1,000.00ನ್ನು ಹಣಕಾಸು ಅಧಿಕಾರಿ, ಮಂಗಳೂರು ವಿಶ್ವವಿದ್ಯಾನಿಲಯ, ಇವರ ಹೆಸರಿಗೆ ಪಾವತಿಯಾಗುವಂತೆ ಡಿ.ಡಿ. ಪಡೆದು ದರಪಟ್ಟಿಯೊಂದಿಗೆ ಸಲ್ಲಿಸತಕ್ಕದ್ದು.
2. ಪಾನ್ ಸಂಖ್ಯೆ ಇಲ್ಲದ ಹೊಲಿಗೆದಾರರ ದರಪಟ್ಟಿಯನ್ನು ಸ್ವೀಕರಿಸಲಾಗುವುದಿಲ್ಲ.
3. ರೂ. 50.00ರ ಸ್ಟ್ಯಾಂಪ್ ಪೇಪರಿನಲ್ಲಿ ಷರತ್ತುಗಳನ್ನು ಒಳಗೊಂಡ ಕರಾರು ಒಪ್ಪಂದಕ್ಕೆ ಹೊಲಿಗೆದಾರರು ಸಹಿ ಮಾಡಿದ ಬಳಿಕ ಸಂಬಂಧಪಟ್ಟವರಿಗೆ ಅಗತ್ಯ ಬಟ್ಟೆಯನ್ನು ಬಿಡುಗಡೆ ಮಾಡಲಾಗುವುದು.
4. ಹೊಲಿಗೆದಾರರು ಬಟ್ಟೆಯ ಉದ್ದ ಮತ್ತು ಅಗಲವನ್ನು ಪರಿಶೀಲಿಸಿಯೇ ದರಪಟ್ಟಿಯನ್ನು ನೀಡತಕ್ಕದ್ದು.
5. ಚೀಲ ಹೊಲಿಯಲು ಒಂದು ಬಾರಿಗೆ 5000 ಮೀಟರ್ ಬಟ್ಟೆ ಮಾತ್ರ ಹೊಲಿಗೆದಾರರಿಗೆ ನೀಡಲಾಗುವುದು.
6. ಬಟ್ಟೆ ಚೀಲಗಳ ಹೊಲಿಗೆಗೆ ಸಂಬಂಧಿಸಿ ಆದೇಶ ನೀಡಿದ 30 ದಿವಸದೊಳಗಾಗಿ ನಿಗದಿಪಡಿಸಿದ ಬಟ್ಟೆ ಚೀಲಗಳನ್ನು ಸಂಪೂರ್ಣವಾಗಿ ಹೊಲಿದು ಪೂರೈಸತಕ್ಕದ್ದು.
7. ಬಟ್ಟೆ ಚೀಲಗಳನ್ನು ತಲಾ 50ರಂತೆ 4 ಬದಿಗಳಿಂದಲೂ ಬಿಗಿದು ಗಟ್ಟಿಯಾದ ಕಟ್ಟುಗಳನ್ನು ಮಾಡತಕ್ಕದ್ದು.
8. ಮೇಲೆ ನಿಗದಿಪಡಿಸಿದ ಸುತ್ತಳತೆಯನ್ನು ಗಮನದಲ್ಲಿಟ್ಟುಕೊಂಡು ಪ್ರತೀ ಚೀಲವನ್ನು ಬಹಳ ಜಾಗರೂಕತೆಯಿಂದ ಹೊಲಿಯತಕ್ಕದ್ದು. ನೀಡಲಾದ ಕೋರಾ ಬಟ್ಟೆ ಸಮರ್ಪಕವಾಗಿರದಿದ್ದಲ್ಲಿ ನ್ಯೂನತೆಗಳನ್ನು ಲಿಖಿತವಾಗಿ ನೀಡಿ ಬಟ್ಟೆಯನ್ನು ಹಿಂದಿರುಗಿಸಿ ಸ್ವೀಕೃತಿ (ರಶೀದಿ) ಪಡೆಯತಕ್ಕದ್ದು.
9. ಬಟ್ಟೆ ಚೀಲಗಳ ಹೊಲಿಗೆಗೆ ಸಂಬಂಧಪಟ್ಟಂತೆ ಯಾವುದೇ ಮುಂಗಡವನ್ನು ನೀಡಲಾಗುವುದಿಲ್ಲ. ಬಟ್ಟೆ ಚೀಲಗಳನ್ನು ಸಂಪೂರ್ಣವಾಗಿ ಸಮರ್ಪಕವಾಗಿ ಹೊಲಿದು ಪೂರೈಸಿದ ನಂತರ ದಾಸ್ತಾನಿಗೆ ತೆಗೆದುಕೊಂಡು ಹೊಲಿಗೆ ವೆಚ್ಚವನ್ನು 30 ದಿವಸದೊಳಗೆ ಪಾವತಿಸಲಾಗುವುದು. ಪೂರೈಸಿದ ಬಟ್ಟೆಗೆ ನಿಗದಿಗೊಳಿಸಲಾದ ಚೀಲಗಳಿಗಿಂತ ಕಡಿಮೆಯಾದಲ್ಲಿ ಕಡಿಮೆಯಾದ ಪ್ರಮಾಣಕ್ಕನುಗುಣವಾಗಿ ಬಟ್ಟೆಯ ಬೆಲೆಯನ್ನು ಪಾವತಿಸಬೇಕಾಗದ ಮೊತ್ತದಿಂದ ಕಡಿತಗೊಳಿಸಲಾಗುವುದು.
10. ಕೋರಾ ಬಟ್ಟೆ ಮತ್ತು ಹೊಲಿದ ಚೀಲಗಳ ಸಾಗಾಟದ ವೆಚ್ಚವನ್ನು ಹೊಲಿಗೆದಾರರೇ ಸ್ವತ: ಭರಿಸತಕ್ಕದ್ದು.
11. ದರಪಟ್ಟಿಗಳನ್ನು ಸ್ವೀಕರಿಸುವ ಇಲ್ಲವೇ ಯಾವುದೇ ಕಾರಣ ನೀಡದೆ ತಿರಸ್ಕರಿಸುವ ಹಕ್ಕು ಕೆಳಗೆ ಸಹಿ ಹಾಕಿದವರಿಗೆ ಸೇರಿರುತ್ತದೆ ಎಂದು ಸ್ಪಷ್ಟಪಡಿಸಲಾಗಿದೆ.
12. ದಿನಾಂಕ **20.09.2023 ರಂದು ಪೂರ್ವಾಹ್ನ 11.00 ಗಂಟೆಗೆ** ದರಪಟ್ಟಿಗಳನ್ನು ಕುಲಸಚಿವರ (ಪರೀಕ್ಷಾ0ಗ) ಕಛೇರಿಯಲ್ಲಿ ತೆರೆಯಲಾಗುವುದು.

Sd/-
ಕುಲಸಚಿವರು (ಪರೀಕ್ಷಾಂಗ)